ಎಫ್.ಡಿ.ಪಿ. ನಂಃ **3/2017**
ಪಿ.ಡಬ್ಲ್ಯೂಃ **1**

ದಿನಾಂಕ **11-09-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಅರ್ಜಿದಾರರ ಪರ: ಶ್ರೀ ಎಸ್.ಎಂ ವಕೀಲರಿಂದಃ

ನಾನು ಈ ದಿನ ನನ್ನ ಮುಂದುವರೆದ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಅಸಲು ದಾವಾ ನಂ.356/2013 ರಲ್ಲಿ ತೀರ್ಪಿನ ಹಾಗೂ ಡಿಕ್ರಿಯ ದೃಡೀಕೃತ ನಕಲು ಪ್ರತಿಗಳನ್ನು ನಿಪಿ-1 ಮತ್ತು 2, ದಿನಾಂಕ 13.09.1976 ರ ಖರೀದಿ ಪತ್ರವನ್ನು ನಿಪಿ-3, 2007-08 ರ ಖಾತಾ ನಕಲು ಪ್ರತಿಯನ್ನು ನಿಪಿ-4, ದಿನಾಂಕ 20.11.2008 ರ ನಿರಾಪೇಕ್ಷಣಾ ಪ್ರಮಾಣ ಪತ್ರವನ್ನು ನಿಪಿ-5, ದಿನಾಂಕ 01.08.2012 ರ ದಾನ ಪತ್ರವನ್ನು ನಿಪಿ-6, ದಿನಾಂಕ 04.08.2012 ರ ಖಾತಾ ವರ್ಗಾವಣೆ ಅರ್ಜಿಯ ಕಚೇರಿ ಪ್ರತಿಯನ್ನು ನಿಪಿ-7, ದಿನಾಂಕ 22.10.2012 ರ ಖಾತಾ ವರ್ಗಾವಣೆ ಆದೇಶದ ಪ್ರತಿಯನ್ನು ನಿಪಿ-8, ದಿನಾಂಕ 26.05.2018 ರ ದಾನ ಪತ್ರವನ್ನು ನಿಪಿ-9, ಇ-ಸ್ವತ್ತು ಪ್ರತಿಯನ್ನು ನಿಪಿ-10, ದಿನಾಂಕ 09.11.2018 ರ ಖಾತಾ ವರ್ಗಾವಣೆ ಆದೇಶದ ಪ್ರತಿಯನ್ನು ನಿಪಿ-11, ದಿನಾಂಕ 20.01.1995 ರ ಕ್ರಯ ಪತ್ರವನ್ನು ನಿಪಿ-12, ದಿನಾಂಕ 12.12.1997 ರ ವಾಡಿ ಗ್ರಾಮ ಪಂಚಾಯಿತಿಗೆ ಸಲ್ಲಿಸಿದ ತಕರಾರು ಅರ್ಜಿಯ ಪ್ರತಿಯನ್ನು ನಿಪಿ-13, ವಾದಿ ಪಂಚಾಯಿತಿಯ ತೆರಿಗೆ ಬೇಡಿಕೆ ಪುಸ್ತಕದ ದೃಡೀಕೃತ ನಕಲು ಪ್ರತಿಯನ್ನು ನಿಪಿ-14, ದಿನಾಂಕ 11.03.1998 ರ ಕಟ್ಟಡ ಪರವಾನಿಗೆ ಪತ್ರವನ್ನು ನಿಪಿ-15, ಕಟ್ಟಡದ ಅನುಮೋದಿತ ನಕಾಶೆಯ ಪ್ರತಿಯನ್ನು ನಿಪಿ-15 ಎ, ದಿನಾಂಕ 11.03.1998 ರ ಕರ ಪಾವತಿಯ ನೋಟಿಸನ್ನು ನಿಪಿ-16, ದಿನಾಂಕ 27.10.1997 ರ ಕರ ಪಾವತಿ ರಸೀದಿಯನ್ನು ನಿಪಿ-17 ಹಾಗೂ ದಿನಾಂಕ 24.02.2020 ರ ಹಕ್ಕು ಬದಲಾವಣೆ ಆದೇಶದ ಪ್ರತಿಯನ್ನು ನಿಪಿ-18 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಗಿದೆ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ